ಸೋಮವಾರಪೇಟೆ	115
ವೀರಾಜಪೇಟೆ	120

ಆ) 1981ರ ಜನಗಣತಿ ಪ್ರಕಾರ ಕೊಡಗು ಜಿಲ್ಲೆಯ ಎಲ್ಲಾ 284 ಜನವಸತಿ ಇರುವ ಕಂದಾಯ ಗ್ರಾಮಗಳನ್ನು ವಿದ್ಯುದ್ದೀಕರಿಸಲಾಗಿದೆ. 1981ರ ಜನಗಣತಿ ಪ್ರಕಾರ ಯಾವ ಜನವಸತಿ ಇರುವ ಕಂದಾಯ ಗ್ರಾಮವು ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿಲ್ಲ.

ಕೃಷಿ ಬಾವಿಗಳಿಗೆ ವಿದ್ಯುತ್ ಒದಗಿಸುವುದು

423(651). ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) 1990-91ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ವಿಭಾಗದಲ್ಲಿ ಕೃಷಿ ಬಾವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ನಿಗದಿಪಡಿಸಿರುವ ಗುರಿ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) 31-1-1991 ರವರೆಗೆ ಸಾಧಿಸಿರುವ ಗುರಿ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):-

ಅ) 1990-91ನೇ ಸಾಲಿನಲ್ಲಿ ಕೊಡಗು ಜಿಲ್ಲೆಯಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುದ್ದೀಕರಣಕ್ಕೆ ನಿಗದಿಪಡಿಸಲಾಗಿದ್ದ ಗುರಿ 250 ಆಗಿದ್ದಿತ್ತು.

ತಾಲ್ಲೂಕುವಾರು ವಿವರ :

ತಾಲ್ಲೂಕು	1990-91ನೇ ಸಾಲಿನಲ್ಲಿ ನಿಗದಿಪಡಿಸಿದ್ದ ಗುರಿ
ಮಡಿಕೇರಿ	70
ಸೋಮವಾರಪೇಟೆ	80
ವೀರಾಜಪೇಟೆ	100

ಸಾಧನೆಯ ವಿವರಗಳು:

ತಾಲ್ಲೂಕು	31-1-91ರವರೆಗೆ ಸಾಧನೆ	1990-91ರ ಸಾಲಿನಲ್ಲಿ ಸಾಧನೆ
ಮಡಿಕೇರಿ	13	52
ಸೋಮವಾರಪೇಟೆ	40	92
ವೀರಾಜಪೇಟೆ	63	126
ಒಟ್ಟು	116	270

ಕೊಡಗು ಜಿಲ್ಲೆಯಲ್ಲಿ ವಿದ್ಯುತ್ ನಿಲುಗಡೆಯಿಂದ ತೊಂದರೆ

424(653). ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊಡಗು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ದಿನಕ್ಕೆ ಆರು ಗಂಟೆಗಳವರೆಗೂ ವಿದ್ಯುತ್‌ನಿಲುಗಡೆಯಾಗುವುದರಿಂದ ಪಂಪ್‌ಸೆಟ್, ಮಿನಿವಾಟರ್ ಸ್ಕೀಂ, ವಿದ್ಯಾರ್ಥಿಗಳಿಗೂ ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?